**ಅ.ದಾವಾ 163/2012** **ಡಿ.ಡಬ್ಲ್ಯೂ- 2**

**ದಿನಾಂಕಃ 11/04/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- 2ನೇ ಪ್ರತಿವಾದಿಯ ಪರವಾಗಿ ಶ್ರೀ ಆರ್.ಪಿ. ವಕೀಲರಿಂದ**

ನಾನು 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ರೇಷ್ಮೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಸಾಕ್ಷಿಯು ಮುಂದುವರಿದು ನಾನು ದಿನಗೂಲಿಯಾಗಿ ಕೆಲಸ ಮಾಡುತ್ತಿದ್ದೆನು ಎಂದು ನುಡಿಯುತ್ತಾರೆ. ನಿಮಗೆ ಸದರಿ ರೇಷ್ಮೆ ಇಲಾಖೆಯಲ್ಲಿ ಕೆಲಸ ಖಾಯಂ ಆಗಿರಲಿಲ್ಲವೇ ಎಂದರೆ ಸಾಕ್ಷಿಯು ನಾನು ಸದರಿ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ 10 ವರ್ಷಗಳ ನಂತರ ಖಾಯಂ ಆಗಿರುತ್ತದೆ. ಆ ರೀತಿ ಖಾಯಂ ಆದ ನಂತರ 11 ವರ್ಷ ನಾನು ಅಲ್ಲಿ ಕೆಲಸ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

2. ನನ್ನ ತಮ್ಮಂದಿರು ಏನು ವಿದ್ಯಾಭಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1979 ರಲ್ಲಿ ನಾವು ಬೇರೆ ಬೇರೆಯಾಗಿರುತ್ತೇವೆ. ಆ ರೀತಿ ವಿಭಾಗದ ಸಂದರ್ಭದಲ್ಲಿ ನನ್ನ ಮಾವನಾದ ಪಟೇಲ್ ತಮ್ಮಯ್ಯ, ನನ್ನ ಹೆಂಡತಿಯ ತಂಗಿಯ ಗಂಡನಾದ ಬೋರಲಿಂಗೇಗೌಡ, ಯೋಗೇಗೌಡರ ಮಾವನಾದ ಮರೀಗೌಡ ಹಾಗೂ ನಮ್ಮ ನೆಂಟರಾದ ಬಸವೇಗೌಡರವರುಗಳು ಸೇರಿದ್ದರು. ಉಳಿದವರು ಯಾರ್ಯಾರು ಸೇರಿದ್ದರು ಎಂದು ನನಗೆ ನೆನಪಿಲ್ಲ. ಆ ಸಂದರ್ಭದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಎಲ್ಲಾ ಆಸ್ತಿಗಳನ್ನು ಕೂಡ ಹಿಸ್ಸೆ ಮಾಡಿಕೊಳ್ಳಲಾಗಿತ್ತು ಎಂದರೆ ಸರಿ. ಸದರಿ ವಿಭಾಗದ ಸಂದರ್ಭದಲ್ಲಿ ಹಳೆ ಸರ್ವೆ ನಂ. 95 ಹೊಸ ಸರ್ವೆ ನಂ. 107 ಸ್ವತ್ತು ವಿಭಾಗ ಆಗಿರಲಿಲ್ಲ. ಆ ರೀತಿ ಸದರಿ ಸ್ವತ್ತನ್ನು ವಿಭಾಗ ಮಾಡಿಕೊಳ್ಳದೇ ಇದ್ದ ಬಗ್ಗೆ ಆ ಸಂದರ್ಭದಲ್ಲಿ ಆದ ವಿಭಾಗ ಪತ್ರದಲ್ಲಿ ಬರೆಸಿಲ್ಲ.

3. ಈ ದಾವೆಯನ್ನು ನಾನು ಹಾಗೂ ಯೋಗೇಗೌಡರವರುಗಳು ಸೇರಿ ಕೃಷ್ಣೇಗೌಡರ ಮೇಲೆ ಹಾಕಿರುತ್ತೇವೆ. ಏನು ಪರಿಹಾರ ಕೇಳಿ ಈ ದಾವೆಯನ್ನು ಹಾಕಿರುತ್ತೀರಿ ಎಂದರೆ ಸಾಕ್ಷಿಯು 1 ಎಕರೆಯಲ್ಲಿ ನಮಗೆ ಹಿಸ್ಸೆ ಬರಬೇಕು ಎಂದು ಹಾಕಲಾಗಿದೆ ಎಂದು ನುಡಿಯುತ್ತಾರೆ. ದಾವಾ ಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ. ಈ ದಾವೆಯಲ್ಲಿ ನಾನು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ 1 ಎಕರೆ 3 ಹಿಸ್ಸೆ ಆಗಬೇಕೆಂದು ಮಾತ್ರ ಬರೆಸಿ ಹಾಕಿರುತ್ತೇನೆ. ಬೇರೆ ಯಾವುದೇ ವಿಚಾರಗಳನ್ನು ಬರೆಸಿಲ್ಲ. ಈ ದಾವೆಯನ್ನು ಯಾವ ಯಾವ ಆಸ್ತಿಗಳನ್ನು ಸೇರಿಸಿ ವಾದಿ ದಾವೆಯನ್ನು ಹೂಡಿರುತ್ತಾರೆ ಎಂಬುದನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನಮ್ಮ ಹೆಸರಿನಲ್ಲಿ ಎಷ್ಟು ಆಸ್ತಿಗಳಿರುತ್ತದೆಯೋ ಅವೆಲ್ಲವನ್ನೂ ಸೇರಿಸಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಅಂದರೆ ನಿಮ್ಮ ಕುಟುಂಬಕ್ಕೆ ಎಷ್ಟು ಆಸ್ತಿ ಇತ್ತು ಅಷ್ಟೂ ಆಸ್ತಿಗಳನ್ನು ಸೇರಿಸಿ ಈ ದಾವೆಯನ್ನು ಹೂಡಿರುತ್ತಾರೆ ಎಂದು ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

4. ಹಳೆ ಸರ್ವೆ ನಂ. 97 ಹೊಸ ಸರ್ವೆ ನಂ. 107 ರಲ್ಲಿರುವ ಸ್ವತ್ತು ಈಗ ಮೂರು ಜನರ ಅಂದರೆ ವಾದಿ ಹಾಗೂ ಇಬ್ಬರು ಪ್ರತಿವಾದಿಯರುಗಳ ಹೆಸರಿನಲ್ಲಿ ತಲಾ ಒಂದೊಂದು ಎಕರೆ ಹಾಗೂ ಉಳಿದ 1 ಎಕರೆ ಸ್ವತ್ತು ಕೃಷ್ಣೇಗೌಡರ ಮಕ್ಕಳ ಹೆಸರಿನಲ್ಲಿ ಇರುತ್ತದೆ. ಸದರಿ 2ನೇ ಪ್ರತಿವಾದಿಯಾದ ಕೃಷ್ಣೇಗೌಡರ ಯಾವ ಮ್ಕಕಳ

ಹೆಸರಿನಲ್ಲಿ ಸದರಿ 1 ಎಕರೆ ಸ್ವತ್ತು ಇರುತ್ತದೆ ಎಂದರೆ ಸಾಕ್ಷಿಯು 2ನೇ ಪ್ರತಿವಾದಿಯ ಮಗನಾದ ಕಾಂತರಾಜ ರವರ ಹೆಸರಿನಲ್ಲಿ 1 ಎಕರೆ, ಪುಟ್ಟರಾಜರವರ ಹೆಸರಿಗೆ 1 ಎಕರೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಕೃಷ್ಣೇಗೌಡರ ಮಕ್ಕಳು ಯಾವುದೇ ಬೆಳೆ ಬೆಳೆದಿಲ್ಲ ಅದು ಪಾಳು ಬಿದ್ದಿರುತ್ತದೆ. 2ನೇ ಪ್ರತಿವಾದಿಯ ಮಕ್ಕಳ ಹೆಸರಿನಲ್ಲಿ ಇದೆ ಎನ್ನುವ ಆಸ್ತಿಯ 1 ಎಕರೆ ಸ್ವತ್ತಿನಲ್ಲಿ ರೇಷ್ಮೆ ಬೆಳೆ ಇರುತ್ತದೆ ಎಂದರೆ ಸರಿ. ಇನ್ನೊಂದು ಎಕರೆಯಲ್ಲಿ ಮಾವಿನ ಗಿಡಗಳು ಇರುತ್ತವೆ ಎಂದರೆ ಸಾಕ್ಷಿಯು ಮಾವಿನಗಿಡ ನೆಟ್ಟಿರುತ್ತಾರೆ ಆದರೆ ತದನಂತರ ಅಲ್ಲಿ ಏನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮಾವಿನ ಗಿಡಗಳನ್ನು 2ನೇ ಪ್ರತಿವಾದಿಯೇ ನೆಟ್ಟಿರುತ್ತಾರೆ. ಸದರಿ ಮಾವಿನಗಿಡಗಳನ್ನು ನೆಡಿಸಿದ ನಂತರ ಈ ದಾವೆಯನ್ನು ಹೂಡಿರುವುದು ಎಂದರೆ ಸರಿಯಲ್ಲ. ಸದರಿ ರೇಶ್ಮೆ ಕೃಷಿ ಹಾಗೂ ಮಾವಿನ ಗಿಡಗಳನ್ನು 2ನೇ ಪ್ರತಿವಾದಿ ನೆಟ್ಟಿರುವುದಲ್ಲ, 2ನೇ ಪ್ರತಿವಾದಿಯ ಮಕ್ಕಳ ಹಿಸ್ಸೆಗೆ ಸದರಿ ಸ್ವತ್ತು ಬಂದಿರುವುದರಿಂದ 2ನೇ ಪ್ರತಿವಾದಿಯ ಮಕ್ಕಳೇ ಸದರಿ ರೇಶ್ಮೆ ಕೃಷಿ ಹಾಗೂ ಮಾವಿನ ಗಿಡಗಳನ್ನು ಹಾಕಿರುವುದು ಎಂದರೆ ಸರಿಯಲ್ಲ.

5. ಪಾಲುಪಟ್ಟಿ ಆದ ನಂತರ ನನ್ನ ಬಳಿ ಇದ್ದ ಸದರಿ ಪಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 2ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪಾಲುಪಟ್ಟಿಯ ಪ್ರತಿಯನ್ನು ಸಾಕ್ಷಿಗೆ ತೋರಿಸಿ ಸದರಿ ಪಾಲುಪಟ್ಟಿಯಲ್ಲಿ ಸರ್ವೆ ನಂ. 95 ರ ಸ್ವತ್ತಿಗೆ ಸಂಬಂಧಿಸಿದಂತೆ ಮಾತ್ರ ತಿದ್ದುಪಡಿ ಆಗಿದ್ದು ಉಳಿದ ಯಾವುದೇ ಅಂಶಗಳು ತಿದ್ದುಪಡಿಯಾಗಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ವಾದಿ ಹಾಗೂ 1ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಸದರಿ ಪಾಲುಪಟ್ಟಿಯನ್ನು ಸಾಕ್ಷಿಗೆ ತೋರಿಸಿ ಅವರೆಡರಲ್ಲಿಯೂ ಸರ್ವೆ ನಂ. 4 ರ 3 ಜನರ ಹಿಸ್ಸೆಯನ್ನು ಕೂಡ ತಿದ್ದುಪಡಿ ಮಾಡಲಾಗಿದೆ ಹಾಗೂ ಸರ್ವೆ ನಂ. 95 ಕ್ಕೆ ಸಂಬಂಧಿಸಿದಂತೆ ಕೃಷ್ಣೇಗೌಡ ಹಾಗೂ ಯೋಗೇಗೌಡರ ಹಿಸ್ಸೆಯನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ಎಂದು ನುಡಿಯುತ್ತಾರೆ. ಈ ದಾವೆಗೆ ಅನುಕೂಲವಾಗಲೀ ಎಂದು ನಮಗೆ ಇಷ್ಟ ಬಂದ ಪ್ರಕಾರ ಸದರಿ ಪಾಲುಪಟ್ಟಿಯಲ್ಲಿ ತಿದ್ದುಪಡಿ ಮಾಡಿಕೊಂಡು ಅವುಗಳ ಜೆರಾಕ್ಸ್ ಪ್ರತಿಗಳನ್ನು ನ್ಯಾಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಪಾಲುಪಟ್ಟಿಯಲ್ಲಿ 2ನೇ ಪ್ರತಿವಾದಿ ಮಾತ್ರ ತಿದ್ದುಪಡಿ ಮಾಡಿರುವುದು ಎಂದು ನುಡಿಯುತ್ತಾರೆ.

6. ದಾವಾನುಸೂಚಿ ಸ್ವತ್ತುಗಳ ಖಾತೆಗಳನ್ನು 1979 ನೇ ಇಸವಿಯಲ್ಲಿ ಮಾಡಿಸಿಕೊಂಡಿರುತ್ತೇನೆ. ಅವತ್ತಿನಿಂದಲೂ ನಮ್ಮ ಹಿಸ್ಸೆಯ ಪ್ರಕಾರ ನಾವು ಸ್ವತ್ತನ್ನು ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿ. ಆ ರೀತಿ ನಿಮ್ಮ ನಿಮ್ಮ ಹಿಸ್ಸೆಗೆ ಬಂದ ಸ್ವತ್ತಿನಲ್ಲಿ ನೀವು ಸ್ವಾಧೀನ ಹೊಂದಿಕೊಂಡು ಬರುತ್ತಿದ್ದರು ಕೂಡ 2ನೇ ಪ್ರತಿವಾದಿಯ ಮಕ್ಕಳಿಗೆ ಸ್ವತ್ತನ್ನು ಹಿಸ್ಸೆ ಮಾಡಿಕೊಟ್ಟು ಸದರಿಯವರ ಹಿಸ್ಸೆಗೆ ಬಂದ ಸ್ವತ್ತನ್ನು ಅವರು ಅಬಾದು ಮಾಡಿಕೊಂಡು ಬೆಳೆ ಬೆಳೆದ ನಂತರ ಹೊಟ್ಟೆಕಿಚ್ಚಿನಿಂದ ಈ ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ಬೆಳೆ ಬೆಳೆದೇ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ನಮ್ಮ ಆಸ್ತಿ ನಾವು ಮಾಡಿಕೊಂಡು ಬರುತ್ತಿರುವುದರಿಂದ ಈ ದಾವೆ ವಜಾ ಆಗಬೇಕಾಗುತ್ತದೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ತೊಂದರೆ

ಕೊಡಬೇಕೆಂದು ನಾನು ಇಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ ವಾದಿಯಾಗಲೀ ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.